# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## -:ವಾರ್ಡ್-42ರ ವಾರ್ಡ್ ಸಮಿತಿ ಸಭೆಯ ನಡವಳಿಗಳು:-

**ದಿನಾಂಕ: 20.02.2021 ರಂದು ಬೆಳಗ್ಗೆ 10.30 ಗಂಟೆಗೆ ವಾರ್ಡ್ ನಂ.42 ಲಕ್ಷ್ಮೀದೇವಿನಗರ, ವಾರ್ಡ್ ಸಮಿತಿ ಸಭೆಯನ್ನು ವಾರ್ಡ್ ನಂ.42ರ ವಾರ್ಡ್ ಕಛೇರಿಯಲ್ಲಿ ನಡೆಸಲಾಗಿದ್ದು, ಸದರಿ ಸಭೆಯ ಸಭಾ ನಡವಳಿಗಳು**

**ಸಭೆಗೆ ಹಾಜರಿದ್ದ ಅಧಿಕಾರಿಗಳು:**

1. ಡಾ|| ಎಂ. ಜಿ. ಹಳ್ಳಿ ಶಿವರಾಮ್, ಅಧ್ಯಕ್ಷರು ಮತ್ತು ನೋಡಲ್ ಅಧಿಕಾರಿಗಳು
2. ಮಣಿ ಮೇಘಲೈ, ಕಿರಿಯ ಆರೋಗ್ಯ ಪರಿವೀಕ್ಷಕರು,
3. ಎಂ.ನಾಗರಾಜು.ಬೆಸ್ಕಾಂ
4. ನಾರಾಯಣಸ್ವಾಮಿ, ಮೇಲ್ವಿಚಾರಕರು
5. ನಿರ್ಮಲ.ಕಂದಾಯ ವಸೂಲಿಗಾರರು.
6. ದೇವರಾಜ್, ಮೇಲ್ವಿಚಾರಕರು
7. ದಾಕ್ಷಯಣಿ ಲಿಂಕ್ ವರ್ಕರ್
8. ಪ್ರಮೀಳ ಲಿಂಕ್ ವರ್ಕರ್
9. ಹರ್ಷಿತ್ ರಾವ್, ವಾರ್ಡ್ ಮಾರ್ಷಲ್
10. ಶ್ರೀನಿವಾಸ್ ವರ್ಕ ಇನ್ಸ್‌ಪೆಕ್ಟರ್, (ಎಹೆಚ್)

ವಾರ್ಡ್-42ರ ವಾರ್ಡ್ ಸಮಿತಿ ಸಭೆಗೆ ಕಾರ್ಯದರ್ಶಿಗಳು ಇಲ್ಲದ ಕಾರಣ ಹಾಜರಿದ್ದ ಎಲ್ಲಾ ಸದಸ್ಯರು ಮತ್ತು ಅಧಿಕಾರಿಗಳನ್ನು ಸ್ವತಃ ಅಧ್ಯಕ್ಷರೇ ಸ್ವಾಗತಿಸಿ ವಾರ್ಡ್ ಸಮಿತಿ ಸಭೆಯು ಪ್ರಾರಂಭವಾಯಿತು.

ಈ ಹಿಂದಿನ ಸಭೆಗಳಲ್ಲಿ ಬಂದಿರುವ ದೂರುಗಳನ್ನು ಪರಾಮರ್ಶಿಸಿ ಸಮಸ್ಯೆಗಳನ್ನು ಬಗೆಹರಿಸಿರುವ ಬಗ್ಗೆ ಕೂಲಂಕುಶವಾಗಿ ತಿಳಿದುಕೊಂಡು ನಂತರ ಪ್ರಸ್ತುತ ಸಮಸ್ಯೆಗಳ ಬಗ್ಗೆ ಚರ್ಚಿಸಲಾಯಿತು.

ವಾರ್ಡ್‌ನ ಸದಸ್ಯರಾದ ಸಹದೇವನ್ ರವರು ಮಾತನಾಡಿ ಲಕ್ಷ್ಮಿದೇವಿನಗರ.ವಿ.ಕೆ.ರಾಮಣ್ಣ ಬಡಾವಣೆಯ 2ನೇ ಅಡ್ಡರಸ್ತೆ ಸ್ವಾಮಿ ಎಂಬುವರ ಮನೆಯ ಮುಂದೆ ವಿದ್ಯುತ್ ದೀಪದ ಕಂಬವು ಬಾಗಿರುವುದು ಕಂಡುಬಂದಿದ್ದು ಹಾಗೂ 1ನೇ ಅಡ್ಡರಸ್ತೆಯಲ್ಲಿ 2 ವಿದ್ಯುತ್ ಕಂಬಗಳು ಬಾಗಿರುವುದನ್ನು ಅಧ್ಯಕ್ಷರ ಗಮನಕ್ಕೆ ತಂದು, ಸ್ಥಳದಲ್ಲೇ ಹಾಜರಿದ್ದ ಬೆಸ್ಕಾಂ ಅಧಿಕಾರಿಗಳಾದ ಶ್ರೀ.ನಾಗರಾಜು.ಎಂ ರವರಿಗೆ ತಕ್ಷಣ ಮೇಲಾಧಿಕಾರಿಗಳಿಗೆ ತಿಳಿಸಿ ಸೂಕ್ತ ಕ್ರಮ ಕೈಗೊಳ್ಳಲು ಅಧ್ಯಕ್ಷರು ಸೂಚಿಸಿದರು

**ಕ್ರಮ: ಕಿರಿಯ ಅಭಿಯಂತರರು ಬೆಸ್ಕಾಂ ವಾರ್ಡ್ ನಂ.42**

Scanned by CamScanner

ಭೈರಪ್ಪ ಎಂಬುವವರು ಮೌಖಿಕವಾಗಿ ಬಂದು ಸಭೆಯಲ್ಲಿ ಸುರೇಶ್ ಎಂಬುವರ ಮೇಲೆ ಬಂದಿರುವ ದೂರಿನ ಮೇರೆಗೆ ಮಾನ್ಯ ಅಧ್ಯಕ್ಷರು ಜಾನುವಾರುಗಳ ಕಸ ಮತ್ತು ಸಗಣಿಯನ್ನು ಬೇರ್ಪಡಿಸಿ ಪ್ರತಿದಿನ ३ ಬಾರಿ ಸ್ವಚ್ಛಗೊಳಿಸಿ ಫಿನಾಯಿಲ್ ಹಾಕಿ ಅಕ್ಕಪಕ್ಕದವರಿಂದ ದೂರುಬಾರದಂತೆ ಕ್ರಮವಹಿಸಲು ಸೂಚಿಸಿದರು.

**ಕ್ರಮ: ಕಿರಿಯ ಆರೋಗ್ಯ ಪರಿವೀಕ್ಷಕರು, ವಾರ್ಡ್ ನಂ.42**

ರಂಗನಾಥ್ ಬಾರ್ ಪಕ್ಕದಲ್ಲಿ ಕಸದ ರಾಶಿಯನ್ನು ಹಾಕುತ್ತಿರುವ ಸಾರ್ವಜನಿಕರಿಗೆ ಬೆಳಗಿನ ಜಾವ 5.00 ಗಂಟೆ ಸಮಯಕ್ಕೆ ಮಾರ್ಷಲ್‌ಗಳು ಕಾದು ಸಾರ್ವಜನಿಕರನ್ನು ಗುರುತಿಸಿ ದಂಡ ವಿಧಿಸಿ ಕಸ ಹಾಕುವುದನ್ನು ತಪ್ಪಿಸಲು ಸೂಚಿಸಿದರು.

**ಕ್ರಮ: ಮಾರ್ಷಲ್‌ಗಳು ಹಾಗೂ ಕಿರಿಯ ಆರೋಗ್ಯ ಪರಿವೀಕ್ಷಕರು, ವಾರ್ಡ್ ನಂ.42**

ಪೌರ ಕಾರ್ಮಿಕರಿಗೆ ಕೈಗವಚ, ಮುಖ ಕವಚ, ಕಾಲು ಕವಚ ಹಾಗೂ ಸ್ಯಾನಿಟೈಜರ್‌ಗಳನ್ನು ನೀಡದಿರುವ ಬಗ್ಗೆ ಮತ್ತು ಸ್ವೀಪಿಂಗ್ ಯಂತ್ರಗಳ ಮುಖಾಂತರ ಮುಖ್ಯರಸ್ತೆಗಳನ್ನು ಸ್ವೀಪಿಂಗ್ ಮಾಡಲು ಅಧ್ಯಕ್ಷರ ಗಮನಕ್ಕೆ ತಂದರು.

**ಕ್ರಮ: ಸಹಾಯಕ ಕಾರ್ಯಪಾಲಕ ಅಭಿಯಂತರರು (ಘನತ್ಯಾಜ್ಯ ವಿಭಾಗ)ವಾರ್ಡ್ ನಂ.42**

ವಿಧಾನ ಸೌಧ ಬಡಾವಣೆಯ ಉದ್ಯಾನವನವನ್ನು ಪಾಲಿಕೆಯ ತೋಟಗಾರಿಕೆ ಇಲಾಖೆಯ ಅಧೀಕ್ಷಕರಿಗೆ ಹಸ್ತಾಂತರರಿಸುವ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳಿಗೆ ಹಾಗೂ ಶಾಸಕರ ಆಪ್ತ ಕಾರ್ಯಾಲಯಕ್ಕೆ ಪತ್ರ ಮುಖೇನಾ ತಿಳಿಸಿಮುಂದಿನ ಕ್ರಮ ಕೈಗೊಳ್ಳಲು ಅಧ್ಯಕ್ಷರು ತಿಳಿಸಿದರು.

**ಕ್ರಮ: ತೋಟಗಾರಿಕೆ ಅಧೀಕ್ಷಕರು (ಆರ್‌ಆರ್‌ನಗರ) ವಲಯ ಮತ್ತು**
**ಸಹಾಯಕ ಕಾರ್ಯಪಾಲಕ ಅಭಿಯಂತರರು ಗೊರಗುಂಟೆಪಾಳ್ಯ ಉಪವಿಭಾಗ**

ಮೇಲ್ಕಂಡ ಸಮಸ್ಯೆಗಳ ಬಗ್ಗೆ ಸುಧೀರ್ಘವಾಗಿ ಚರ್ಚಿಸಿ, ಕಾರ್ಯದರ್ಶಿಯವರ ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

(ಎಸ್.ಜಿ.ಉಮೇಶ್.)
ಪ್ರಭಾರ ಸಹಾಯಕ ಕಾರ್ಯಪಾಲಕ
ಅಭಿಯಂತರರು ಹಾಗೂ
ಸದಸ್ಯ ಕಾರ್ಯದರ್ಶಿ

(ಡಾ|| ಎಂ. ಜಿ. ಹಳ್ಳಿ ಶಿವರಾಮ್)
ವಾರ್ಡ್ ನೋಡಲ್ ಅಧಿಕಾರಿ
ವಾರ್ಡ್ ಸಂಖ್ಯೆ:42

Scanned by CamScanner